## ಎರಡನೇ ಸುತ್ತು ಸೀಟು ಹಂಚಿಕೆ ಸೂಚನೆಗಳು

2016ನೇ ಸಾಲಿನಲ್ಲಿ ವಿವಿಧ ಕೋರ್ಸುಗಳಿಗೆ ಸರ್ಕಾರವು ನಿಗದಿ ಪಡಿಸಿರುವ ಸೀಟ್ ಮ್ಯಾಟ್ರಿಕ್ಸ್ ಅನ್ನು ಅಳವಡಿಸಿಕೊಂಡು, ಅಭ್ಯರ್ಥಿಗಳ ಮೆರಿಟ್ ಮತ್ತು ಅಭ್ಯರ್ಥಿಗಳು ದಾಖಲಿಸಿರುವ ಆಪ್ಷನ್ ಅನ್ನು ಆದರಿಸಿ ಮೊದಲ ಸುತ್ತಿನ ಸೀಟನ್ನು ಹಂಚಿಕೆ ಮಾಡಲಾಗಿತ್ತು.

ಮೊದಲ ಸುತ್ತಿನ ಸೀಟು ಹಂಚಿಕೆಯಾದ ನಂತರ; ಉಳಿದ ಸೀಟುಗಳಿಗೆ, ರದ್ದುಗೊಂಡ ಸೀಟುಗಳಿಗೆ, ಛಾಯ್ಸ್ – 3 ಮತ್ತು ಛಾಯ್ಸ್ –4 ಮುಖಾಂತರ ಬಂದ ಸೀಟುಗಳಿಗೆ ಮೀಸಲಾತಿ ನಿಯಮಗಳಂತೆ ಎರಡನೇ ಸುತ್ತಿನ ಸೀಟು ಹಂಚಿಕೆ ಮಾಡಲಾಗಿದೆ.

ಸೀಟು ಹಂಚಿಕೆಯ ಫಲಿತಾಂಶವನ್ನು ಅಭ್ಯರ್ಥಿಗಳು ಸಿಇಟಿ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ಅಭ್ಯರ್ಥಿಗಳಿಗೆ ಈ ಕೆಳಗೆ ವಿವರಿಸಿರುವಂತೆ ನಿರ್ಣಯಗಳನ್ನು ತೆಗೆದುಕೊಳ್ಳ ಬಹುದಾಗಿರುತ್ತದೆ.

Choice–1) ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು / ಕಾಲೇಜು ತೃಪ್ತಿಕರವಾಗಿದೆ ಎಂದು ಖಚಿತಪಡಿಸಿ ಕೊಳ್ಳಬೇಕು. ತೃಪ್ತಿಕರವಾಗಿದ್ದಲ್ಲಿ, Choice–1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

Choice–2) ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಆದರೆ ನನಗೆ ಇನ್ನೂ ಉತ್ತಮ ಸೀಟು ಬೇಕಾಗಿದೆ, ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ Choice–2 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

Choice–3) ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ಆದ್ದರಿಂದ ನಾನು ಮುಂದಿನ ಸುತ್ತಿನಲ್ಲಿ ಭಾಗವಹಿಸುತ್ತೇನೆ ಎಂದು ನಿರ್ಣಯಿಸಿದರೆ Choice–3 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

Choice–4) ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೂ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ ಅಥವಾ ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ನಿರ್ಣಯಿಸಿದರೆ Choice–4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

### ಎರಡನೇ ಸುತ್ತಿನಲ್ಲಿ Choice–1 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

ಅ) ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟವಾದ ನಂತರ ಅಭ್ಯರ್ಥಿಯು ತಮಗೆ ದೊರಕಿರುವ ಸೀಟು ತೃಪ್ತಿಕರವಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

ಆ) ತೃಪ್ತಿಕರವಾಗಿದ್ದಲ್ಲಿ, Choice–1 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

ಇ) ನಂತರ ಅದೇ ವೆಬ್‌ಸೈಟ್‌ನಿಂದಲೇ ಮೂರು ಪ್ರತಿಯುಳ್ಳ ಚಲನ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು / ಪ್ರಿಂಟ್ ತೆಗೆದುಕೊಳ್ಳಬೇಕು.

ಈ) ಚಲನ್ ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳು ಅಂದರೆ, ಅಭ್ಯರ್ಥಿಯ ಹೆಸರು, ಸಿಇಟಿ ಸಂಖ್ಯೆ, ಆಯ್ಕೆಯಾಗಿರುವ ಕಾಲೇಜು ಮತ್ತು ಕೋರ್ಸಿನ ವಿವರ, ಅಭ್ಯರ್ಥಿಯು ಪಾವತಿಸಬೇಕಾದ ಶುಲ್ಕ, ಬ್ಯಾಂಕ್ ಖಾತೆ ಸಂಖ್ಯೆ ಇವೆಲ್ಲವನ್ನೂ ಮುದ್ರಿಸಲಾಗಿರುತ್ತದೆ. ಅಭ್ಯರ್ಥಿಯು ಸರಿಯಾಗಿದೆ ಎಂದು ಪರಿಶೀಲಿಸಿ ಸಹಿ ಮಾಡಬೇಕು.

ಉ) ನಂತರ **ಪ್ರಾಧಿಕಾರವು ನಿಗದಿ ಪಡಿಸುವ** ಬ್ಯಾಂಕಿನ ಯಾವುದೇ ಶಾಖೆಯಲ್ಲಿ ನಿಗದಿತ ಶುಲ್ಕವನ್ನು ಪಾವತಿಸಬೇಕು.

ಎ) ಬ್ಯಾಂಕಿನವರು ಶುಲ್ಕವನ್ನು ತೆಗೆದುಕೊಂಡ ನಂತರ ಕೆಇಎ ಪ್ರತಿ ಮತ್ತು ಬ್ಯಾಂಕ್ ಪ್ರತಿಯನ್ನು ತಮ್ಮೊಡನೆ ಇಟ್ಟುಕೊಂಡು, ವಿದ್ಯಾರ್ಥಿ ಪ್ರತಿಯನ್ನು ಹಿಂದಿರುಗಿಸುತ್ತಾರೆ.

ಏ) ಶುಲ್ಕ ಪಾವತಿಯಾದ ಎರಡು ಗಂಟೆಯ ನಂತರ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಐ) ನಂತರ ಪ್ರಾಧಿಕಾರದ ವೆಬ್‌ಸೈಟ್ ನಿಂದ ಪ್ರವೇಶ ಪತ್ರವನ್ನು ಪಡೆದು ನಿಗದಿ ಪಡಿಸಿದ ಜಾಗದಲ್ಲಿ ಅಭ್ಯರ್ಥಿಯು ಸಹಿಯನ್ನು ಮಾಡಬೇಕು ಹಾಗು ಎಲ್ಲಾ ಮೂಲ ದಾಖಲೆಗೊಳೊಂದಿಗೆ ಪ್ರವೇಶ ಪತ್ರದಲ್ಲಿ ನಮೂದಿಸಿರುವ ಕೊನೆಯ ದಿನಾಂಕದ ಒಳಗಾಗಿ ಕಾಲೇಜಿನಲ್ಲಿ ಪ್ರವೇಶ ಪಡೆಯಬೇಕು.

ಒ) ಕಾಲೇಜಿನಲ್ಲಿ ಪ್ರವೇಶ ಪಡೆದ ನಂತರ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಕಾಲೇಜಿಗೆ ಪ್ರವೇಶ ಪಡೆದ ಬಗ್ಗೆ ದಾಖಲಿಸಬೇಕು.

**ವಿಶೇಷ ಸೂಚನೆ:** ಎರಡನೇ ಸುತ್ತಿನಲ್ಲಿ Choice–1 ಅನ್ನು ಆಯ್ಕೆ ಮಾಡಿ ಸೀಟನ್ನು ಪಡೆದ ನಂತರ, ಅಭ್ಯರ್ಥಿಗಳು ಸೀಟನ್ನು ರದ್ದುಗೊಳಿಸಬೇಕು ಎಂದು ನಿರ್ಣಯಿಸಿದಲ್ಲಿ ಅಂತಹ ಅಭ್ಯರ್ಥಿಗಳು ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ಒಳಗಾಗಿ ಯಾವುದೇ ಕೆಇಎ ಸಹಾಯಕ ಕೇಂದ್ರದಲ್ಲಿ ಸೀಟನ್ನು ರದ್ದುಪಡಿಸಬೇಕು. ಅಂತಹ ಅಭ್ಯರ್ಥಿಗಳಿಗೆ ಪಾವತಿಸಿದ ಮೊತ್ತದಲ್ಲಿ ನಿಯಮಾನುಸಾರ ರೂ.5,000/– ಅನ್ನು ಕಟಾವು ಮಾಡಿ ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು. ಒಂದುವೇಳೆ ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ನಂತರ ಸೀಟನ್ನು ರದ್ದು ಪಡಿಸಿಕೊಂಡಲ್ಲಿ ಪಾವತಿಸಿದ ಎಲ್ಲಾ ಶುಲ್ಕವನ್ನು ನಿಯಮಾನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಎರಡನೇ ಸುತ್ತಿನಲ್ಲಿ Choice–2 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ನಿರ್ದೇಶನಗಳನ್ನು ಪಾಲಿಸಬೇಕು.

- Choice–2 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ **ಕಡ್ಡಾಯವಾಗಿ ಶುಲ್ಕವನ್ನು ಪಾವತಿಸಬೇಕು. ಶುಲ್ಕ ಪಾವತಿ ನಂತರ ಪ್ರವೇಶ ಪತ್ರವನ್ನು ಡೌನ್ ಲೋಡ್ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ ಅಥವಾ ಕಾಲೇಜಿಗೆ ಹೋಗಿ ಪ್ರವೇಶ ಪಡೆಯುವಂತಿಲ್ಲ.**

**ಶುಲ್ಕವನ್ನು ಪಾವತಿಸುವ ವಿಧಾನ**

- Choice–2 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.
- ನಂತರ ಅದೇ ವೆಬ್ ಸೈಟ್‌ನಿಂದಲೇ ಮೂರು ಪ್ರತಿಯುಳ್ಳ ಚಲನ್ ಅನ್ನು ಡೌನ್ ಲೋಡ್ ಮಾಡಿಕೊಳ್ಳಬೇಕು / ಪ್ರಿಂಟ್ ತೆಗೆದುಕೊಳ್ಳಬೇಕು.
- ಚಲನ್ ನಲ್ಲಿ ಅಭ್ಯರ್ಥಿಯ ಎಲ್ಲಾ ವಿವರಗಳು ಅಂದರೆ, ಅಭ್ಯರ್ಥಿಯ ಹೆಸರು, ಸಿಇಟಿ ಸಂಖ್ಯೆ, ಆಯ್ಕೆಯಾಗಿರುವ ಕಾಲೇಜು ಮತ್ತು ಕೋರ್ಸಿನ ವಿವರ, ಅಭ್ಯರ್ಥಿಯು ಪಾವತಿಸಬೇಕಾದ ಶುಲ್ಕ, ಬ್ಯಾಂಕ್ ಖಾತೆ ಸಂಖ್ಯೆ ಇವೆಲ್ಲವನ್ನೂ ಮುದ್ರಿಸಲಾಗಿರುತ್ತದೆ. ಅಭ್ಯರ್ಥಿಯು ಸರಿಯಾಗಿದೆ ಎಂದು ಪರಿಶೀಲಿಸಿ ಸಹಿ ಮಾಡಬೇಕು.
- ನಂತರ ಪ್ರಾಧಿಕಾರವು ನಿಗದಿಪಡಿಸುವ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ನಿಗದಿತ ಶುಲ್ಕವನ್ನು ಪಾವತಿಸಬೇಕು.
- ಬ್ಯಾಂಕಿನವರು ಶುಲ್ಕವನ್ನು ತೆಗೆದುಕೊಂಡ ನಂತರ ಕೆಇಎ ಪ್ರತಿ ಮತ್ತು ಬ್ಯಾಂಕ್ ಪ್ರತಿಯನ್ನು ತಮ್ಮೊಡನೆ ಇಟ್ಟುಕೊಂಡು, ವಿದ್ಯಾರ್ಥಿ ಪ್ರತಿಯನ್ನು ಹಿಂದಿರುಗಿಸುತ್ತಾರೆ.
- ವಿದ್ಯಾರ್ಥಿ ಪ್ರತಿಯ ಚಲನ್ ಅನ್ನು ತಮ್ಮೊಡನೆ ಇಟ್ಟುಕೊಂಡು **ಮುಂದುವರಿದ ಎರಡನೇ ಸುತ್ತಿನಲ್ಲಿ** ವೇಳಾಪಟ್ಟಿಯಂತೆ ಭಾಗವಹಿಸಬೇಕು.
- ಮುಂದುವರಿದ ಎರಡನೇ ಸುತ್ತಿನಲ್ಲಿ ಬೇರೆ ಯಾವುದಾದರೂ ಸೀಟು ದೊರಕಿದಲ್ಲಿ ಅಂತಹ ಸೀಟಿಗೆ ಈಗ ಪಾವತಿಸಿದ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದು. ಮತ್ತು ಏನಾದರೂ ಹೆಚ್ಚಿಗೆ ಪಾವತಿಸಿದ್ದರೆ ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು.

- Choice–2 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ತಮ್ಮೊಡನೆ ಉಳಿಸಿಕೊಂಡು ಮುಂದುವರಿದ ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಯಾವುದೇ ಸೀಟು ಹಂಚಿಕೆಯಾದಲ್ಲಿ ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟು ರದ್ದುಗೊಳ್ಳುತ್ತದೆ. ಮುಂದುವರಿದ ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಎರಡನೇ ಸುತ್ತಿನಲ್ಲಿ ಪಡೆದ ಸೀಟು ಅವರ ಬಳಿಯೇ ಇರುತ್ತದೆ.
- ಮೆರಿಟ್ ಆಧಾರದ ಮೇಲೆ ಯಾವುದೇ ಸೀಟು ಹಂಚಿಕೆಯಾಗದಿದ್ದಲ್ಲಿ ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಅಭ್ಯರ್ಥಿಯ ಹೆಸರಿನಲ್ಲಿರುತ್ತದೆ.

**ವಿಶೇಷ ಸೂಚನೆ:**

1. ಎರಡನೇ ಸುತ್ತಿನಲ್ಲಿ Choice–2 ಅನ್ನು ಆಯ್ಕೆ ಮಾಡಿ ಶುಲ್ಕವನ್ನು ನಿಗದಿತ ದಿನಾಂಕದೊಳಗೆ ಪಾವತಿಸಲು ವಿಫಲರಾದಲ್ಲಿ ಅಂತಹ ಅಭ್ಯರ್ಥಿಗಳ ಸೀಟನ್ನು ರದ್ದುಪಡಿಸಿಕೊಳ್ಳಲಾಗುವುದು.
2. ಎರಡನೇ ಸುತ್ತಿನಲ್ಲಿ Choice–2 ಅನ್ನು ಆಯ್ಕೆ ಮಾಡಿ ಶುಲ್ಕವನ್ನು ಪಾವತಿಸಿದ ನಂತರ, ಅಭ್ಯರ್ಥಿಗಳು ಸೀಟನ್ನು ರದ್ದುಗೊಳಿಸಬೇಕು ಎಂದು ನಿರ್ಣಯಿಸಿದಲ್ಲಿ ಅಂತಹ ಅಭ್ಯರ್ಥಿಗಳು ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ಒಳಗಾಗಿ ಯಾವುದೇ ಕೆಇಎ ಸಹಾಯಕ ಕೇಂದ್ರದಲ್ಲಿ ಸೀಟನ್ನು ರದ್ದುಪಡಿಸಬೇಕು. ಅಂತಹ ಅಭ್ಯರ್ಥಿಗಳಿಗೆ ಪಾವತಿಸಿದ ಮೊತ್ತದಲ್ಲಿ ನಿಯಮಾನುಸಾರ ರೂ.5,000/– ಅನ್ನು ಕಟಾವು ಮಾಡಿ ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು. ಒಂದುವೇಳೆ ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ನಂತರ ಸೀಟನ್ನು ರದ್ದು ಪಡಿಸಿಕೊಂಡಲ್ಲಿ ಪಾವತಿಸಿದ ಎಲ್ಲಾ ಶುಲ್ಕವನ್ನು ನಿಯಮಾನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

## Choice–3 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು ಈ ಕೆಳಗಿನ ಅಂಶಗಳನ್ನು ಗಮನಿಸತಕ್ಕದ್ದು.

- Choice–3 ಅನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸುವ ಅಗತ್ಯವಿರುವುದಿಲ್ಲ.
- Choice–3 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟು ಇಷ್ಟವಿರುವುದಿಲ್ಲ.
- Choice–3 ಅಭ್ಯರ್ಥಿಗಳು ಎರಡನೇ ಸುತ್ತಿನಲ್ಲಿ ಆಯ್ಕೆಯಾದ ಸೀಟನ್ನು ರದ್ದುಪಡಿಸಿಕೊಂಡು (ತಮ್ಮೊಡನೆ ಉಳಿಸಿಕೊಳ್ಳದೆ) ಮುಂದುವರಿದ ಎರಡನೇ ಸುತ್ತಿನಲ್ಲಿ ಭಾಗವಹಿಸುತ್ತಾರೆ. ಅಂತಹ ಅಭ್ಯರ್ಥಿಗಳಿಗೆ ಮುಂದುವರಿದ ಎರಡನೇ ಸುತ್ತಿನಲ್ಲಿ ಯಾವುದೇ ಸೀಟು ಹಂಚಿಕೆಯಾದಲ್ಲಿ ಮಾತ್ರ ಅವರಿಗೆ ಸೀಟು ದೊರಕುತ್ತದೆ.

## Choice – 4 ಅನ್ನು ಆಯ್ಕೆ ಮಾಡುವ ಅಭ್ಯರ್ಥಿಗಳು

ಅಭ್ಯರ್ಥಿಯು ತಮಗೆ ಎರಡನೇ ಸುತ್ತಿನಲ್ಲಿ ದೊರಕಿರುವ ಸೀಟು ತೃಪ್ತಿಕರವಾಗಿಲ್ಲ ನನಗೆ ದೊರಕಿರುವ ಸೀಟು ಬೇಡ ಹಾಗೂ ನನಗೆ ಮುಂದಿನ ಸುತ್ತಿನಲ್ಲೂ ಸಹ ಯಾವುದೇ ಸೀಟು ತೆಗೆದುಕೊಳ್ಳಲು ಇಷ್ಟವಿಲ್ಲ ಅಥವಾ ನಾನು ಬೇರೆ ಸಂಸ್ಥೆಯಿಂದ ಸೀಟು ತೆಗೆದುಕೊಳ್ಳುತ್ತೇನೆ ಎಂದು ನಿರ್ಣಯಿಸಿದರೆ Choice–4 ಅನ್ನು ಪ್ರಾಧಿಕಾರದ ವೆಬ್‌ಸೈಟ್ ನಲ್ಲಿ ಆಯ್ಕೆ ಮಾಡಿಕೊಳ್ಳಬೇಕು.

## ಅಭ್ಯರ್ಥಿಗಳಿಗೆ ವಿಶೇಷ ಸೂಚನೆ:

- ಮೊದಲನೇ ಸುತ್ತಿನಲ್ಲಿ ಅಥವಾ ಎರಡನೇ ಸುತ್ತಿನಲ್ಲಿ Choice–1 ಅನ್ನು ಆಯ್ಕೆ ಮಾಡಿ ಸೀಟನ್ನು ಪಡೆದ ನಂತರ, ಅಭ್ಯರ್ಥಿಗಳು ಸೀಟನ್ನು ರದ್ದುಗೊಳಿಸಬೇಕು ಎಂದು ನಿರ್ಣಯಿಸಿದಲ್ಲಿ ಅಂತಹ ಅಭ್ಯರ್ಥಿಗಳು ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ಒಳಗಾಗಿ ಯಾವುದೇ ಕೆಇಎ ಸಹಾಯಕ ಕೇಂದ್ರದಲ್ಲಿ ಸೀಟನ್ನು ರದ್ದುಪಡಿಸಬೇಕು. ಅಂತಹ ಅಭ್ಯರ್ಥಿಗಳಿಗೆ ಪಾವತಿಸಿದ ಮೊತ್ತದಲ್ಲಿ ನಿಯಮಾನುಸಾರ ರೂ.5,000/– ಅನ್ನು ಕಟಾವು ಮಾಡಿ ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು. ಒಂದುವೇಳೆ ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ನಂತರ ಸೀಟನ್ನು ರದ್ದು ಪಡಿಸಿಕೊಂಡಲ್ಲಿ ಪಾವತಿಸಿದ ಎಲ್ಲಾ ಶುಲ್ಕವನ್ನು ನಿಯಮಾನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. (ಸೀಟನ್ನು ರದ್ದುಗೊಳಿಸುವ ವಿಧಾನವನ್ನು ತಿಳಿಯುವುದಕ್ಕಾಗಿ ಪ್ರಾಧಿಕಾರದ ವೆಬ್‌ಸೈಟ್ ಅನ್ನು ನೋಡಿರಿ)
- ಎರಡನೇ ಸುತ್ತಿನಲ್ಲಿ Choice–2 ಅನ್ನು ಆಯ್ಕೆ ಮಾಡಿ ಶುಲ್ಕವನ್ನು ಪಾವತಿಸಿದ ನಂತರ, ಅಭ್ಯರ್ಥಿಗಳು ಸೀಟನ್ನು ರದ್ದುಗೊಳಿಸಬೇಕು ಎಂದು ನಿರ್ಣಯಿಸಿದಲ್ಲಿ ಅಂತಹ ಅಭ್ಯರ್ಥಿಗಳು ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ಒಳಗಾಗಿ ಯಾವುದೇ ಕೆಇಎ ಸಹಾಯಕ ಕೇಂದ್ರದಲ್ಲಿ ಸೀಟನ್ನು ರದ್ದುಪಡಿಸಬೇಕು. ಅಂತಹ ಅಭ್ಯರ್ಥಿಗಳಿಗೆ ಪಾವತಿಸಿದ ಮೊತ್ತದಲ್ಲಿ ನಿಯಮಾನುಸಾರ ರೂ.5,000/– ಅನ್ನು ಕಟಾವು ಮಾಡಿ ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು. ಒಂದುವೇಳೆ ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ನಂತರ ಸೀಟನ್ನು ರದ್ದು ಪಡಿಸಿಕೊಂಡಲ್ಲಿ ಪಾವತಿಸಿದ ಎಲ್ಲಾ ಶುಲ್ಕವನ್ನು ನಿಯಮಾನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**ಗಮನಿಸಿ:**

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಇತರೆ ಸಂಸ್ಥೆಗಳಿಂದಲೂ ಸಹ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳುವ ಸಂಭವವಿರುತ್ತದೆ. ಯಾವುದೇ ಅಭ್ಯರ್ಥಿಯು ಪ್ರಾಧಿಕಾರದಿಂದ ಸೀಟನ್ನು ಪಡೆದು ಇತರೆ ಸಂಸ್ಥೆಯಿಂದಲೂ ಸೀಟನ್ನು ಆಯ್ಕೆಮಾಡಿಕೊಂಡು ಪ್ರಾಧಿಕಾರದಿಂದ ಪಡೆದ ಸೀಟಿಗೆ ಪ್ರವೇಶ ಪಡೆಯದೇ ಇದ್ದಲ್ಲಿ ಅಂತಹ ಪ್ರಾಧಿಕಾರದ ಸೀಟುಗಳು ಸೀಟ್ ಬ್ಲಾಕಿಂಗ್ ಆಗುತ್ತದೆ ಮತ್ತು ಹೆಚ್ಚು ಸಬ್ಸಿಡಿ ಹೊಂದಿರುವ ಸರಕಾರಿ ಸೀಟುಗಳು ಸದುಪಯೋಗವಾಗದೆ ನಷ್ಟಗೊಳ್ಳುತ್ತದೆ. ತಮ್ಮಂತೆಯೇ ಇತರೆ ಸರಿ ಸಮಾನ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಸರದಿಯಲ್ಲಿ ಕಾಯುತ್ತಿರುವುದನ್ನು ಅಭ್ಯರ್ಥಿಗಳು ತಿಳಿಯಬೇಕು. ಆದ್ದರಿಂದ ಅಭ್ಯರ್ಥಿಗಳು ಇತರೆ ಸಂಸ್ಥೆಯಿಂದ ಪಡೆದ ಸೀಟುಗಳಿಗೆ ಪ್ರವೇಶ ಪಡೆದಲ್ಲಿ ಪ್ರಾಧಿಕಾರದಿಂದ ಪಡೆದ ಸೀಟನ್ನು ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ಒಳಗಾಗಿ ರದ್ದುಪಡಿಸಿಕೊಳ್ಳಲು ಸೂಚಿಸಿದೆ.